


ಪ್ರೇಮಶೇಖರ

**ಕಥೆ ಪೂರ್ಣಗೊಂಡಿತು.**

ಒಮ್ಮೆ ನೀಳ ನಿರಾಳ ಉಸಿರುಗರೆದು ಕೈಗಳನ್ನು ಕೊರಳ ಹಿಂದೆ ಕೊಂಡೊಯ್ದು ಬೆರಳುಗಳನ್ನು ಹೆಣೆದು ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿ ತಲೆಯನ್ನು ಮೇಲೆತ್ತಿ 'ಹ್ಲೂ ಹ್ಲುಹ್ಲುಹ್ಲೂಂ' ಎಂದು ರಾಗವಾಗಿ ಸದ್ದು ಹೊರಡಿಸುತ್ತಾ ಮೈಮುರಿದೆ. ಒಮ್ಮೆ ದೀರ್ಘವಾಗಿ ಆಕಳಿಸಿದೆ.

ಬೆಳಿಗ್ಗೆಬೆಳಿಗ್ಗೆಯೇ ಬಂದ ಅಪರಿಚಿತ ಹೆಣ್ಣು ಕರೆ, 'ನಿಮ್ಮ ಕಥೆಗಳನ್ನೆಲ್ಲಾ ಒಂದೂ ಬಿಡದೆ ಓದಿದೀನಿ, ಒಂದೂ ಬಿಡದೆ ಎಲ್ಲವನ್ನೂ ಮೆಚ್ಚಿದೀನಿ' ಎಂಬ ಸಂಕೋಚದಲ್ಲಿ ಆರಂಭವಾಗಿ ಅಂತ್ಯವಾಗುವ ಹೊತ್ತಿಗೆ ಸಲಿಗೆಯ ನಗೆಯಲ್ಲಿ ತೋಯ್ದುಹೋದ ಹೇಳಿಕೆ, ಹಿಂದೆಯೇ 'ನಾಳೆ ನನ್ನ ಬರ್ತ್‌ಡೇ, ನನಗೆ ನಿಮ್ಮಿಂದ ಉಡುಗೊರೆ ಬೇಕು, ನಿಮ್ಮದೊಂದು ಹೊಚ್ಚಹೊಸ ಕಥೆ' ಎಂಬ ವರ್ಷ ವರ್ಷಗಳ ಪರಿಚಯದಂಥ ಬೇಡಿಕೆ! ನನಗೆ ಅಚ್ಚರಿ, ಗೊಂದಲ. ದಿಗ್ಭ್ರಮೆ ಆದರೂ, 'ನೀವ್ಯಾರು, ಹೆಸರೇನು, ಎಲ್ಲಿಯೋರು?' ಎಂಬ ನನ್ನ ಪ್ರಶ್ನೆಗಳ ಸರಮಾಲೆಗೆ ಉತ್ತರವಾಗಿ ಅವಳು ಕುಸುಕು ನಗೆಯ ಸುರುಸುರು ಬತ್ತಿ ಹಚ್ಚಿದ್ದಳು. ನಗೆಯ ನಡುವೆಯೇ 'ನನಗೇ ಅಂತಾನೇ ನೀವು ಒಂದು ಹೊಸ ಕಥೆ ಬರೀಬೇಕು. ಕಥೆ ಪೂರ್ಣ ಆದ ಮೇಲೆ ಮೆಸೇಜ್ ಮಾಡಿ. ನನ್ನ ಇಮೇಲ್ ಐಡಿ ಕಳಿಸ್ತೀನಿ. ಕಥೆ ನನ್ನ ಮೈಲ್ ಬಾಕ್ಸ್‌ಗೆ ಬಿದ್ದ ಒಡನೆಯೇ ನನ್ನ ಹೆಸರು, ವಿಳಾಸ ಅಷ್ಟೇ ಏಕೆ, ಬೇಕು ಅಂತ ನೀವು ಕೇಳಿದ್ರೆ ನನ್ನ ಜಾತಕಾನೂ ಕಳಿಸಿಬಿಡ್ತೀನಿ' ಎಂದು ನನ್ನನ್ನು ದಂಗಾಗಿಸಿಬಿಟ್ಟಿದ್ದಳು. ಅದು ಸಾಲದು ಎಂಬಂತೆ, 'ನಿಮ್ಮ ಜಾತಕ ಈಗಾಗಲೇ ನನ್ನ ಕೈಲಿದೆ ಕಥೆಗಾರ್ರೇ' ಎಂದು ಕುಲುಕುಲು ನಕ್ಕು ಕರೆ ಕತ್ತರಿಸಿದ್ದಳು.

ಆ ಗಳಿಗೆಯಿಂದ ನಾನು ನಾನಾಗಿರಲಿಲ್ಲ. ಹಾಡಿದ್ದೇ ಹಾಡುವ ಕಿಸಬಾಯಿ ದಾಸಯ್ಯನಂಥ ಏಕತಾನತೆಯ ಫೇಸ್‌ಬುಕ್ ಹೊಗಳಿಕೆಗಳು, ಭಾವ ಕಳೆದುಕೊಂಡ ವಾಟ್ಸ್‌ಆ್ಯಪ್ ಇಮೋಜಿಗಳು ನನ್ನ ಕಥಾಯಾನವನ್ನೇ ನಿಸ್ಸಾರಗೊಳಿಸಿರುವ ಈ ದಿನಗಳಲ್ಲಿ ಈಕೆಯ ಈ ಕರೆಯೊಂದು ಪ್ಲೆಸೆಂಟ್ ಸರ್‌ಪ್ರೈಸ್, ನನ್ನ ಬದುಕಿನಲ್ಲಿ ನಿಜಕ್ಕೂ ಹೊಸ ನೀರು. ತರಗತಿಯಲ್ಲಿ ಪಾಠ ಮಾಡುವಾಗಲೂ ನನ್ನ ಕಿವಿಗಳಲ್ಲಿ ಅದೇ ಮಾತುಗಳು ರಿಂಗಣಿಸುತ್ತಿದ್ದವು. ಸಂಜೆ ಮನೆಗೆ ಹಿಂತಿರುಗುವ ಹೊತ್ತಿಗೆ ಕಥೆಯೊಂದು ಸ್ಪಷ್ಟ ರೂಪ ಪಡೆದಿತ್ತು. ಚಾಯ್ ಮಾಡಿ ಕಪ್ ಅನ್ನು ಎಡಗೈಲಿ ಹಿಡಿದಂತೇ ಲ್ಯಾಪ್‌ಟಾಪ್ ತೆರೆದೆ.

ಎರಡು ಸಾಲು ಟೈಪಿಸುವಷ್ಟರಲ್ಲಿ ಮನಸ್ಸು ಬೇರೆಯೇ ದಾರಿ ಹಿಡಿಯಿತು. ಗುರುತು ಪರಿಚಯ ಎಂಥದ್ದೂ ಇಲ್ಲದ ಹೆಣ್ಣೊಬ್ಬಳು 'ಕಥೆ ಬೇಕು' ಅಂತ ಕೇಳಿದ ಕೂಡಲೇ ಹೀಗೆ ದಢಗುಟ್ಟಿಕೊಂಡು ಬರೆಯಲು ಕೂತ ನನ್ನದೆಂಥ ಹುಚ್ಚಾಟ! ಕರೆ ಹೆಣ್ಣಿನದು ಎನ್ನುವ ಕಾರಣಕ್ಕಷ್ಟೇ ತರಾತುರಿಯಲ್ಲಿ ಕನಸು ಕಟ್ಟುವಷ್ಟು ಬಲಹೀನವೇ ನನ್ನ ಮನಸ್ಸು? ಈಗಷ್ಟೇ ಆರಂಭವಾಗಿರುವ ಅಧ್ಯಾಪಕ ವೃತ್ತಿಯಲ್ಲಿ ಸಾಲುಸಾಲು ವಿದ್ಯಾರ್ಥಿನಿಯರ ಮುಂದೆ ನಾನು ಸಾಲುಸಾಲಾಗಿ ನಗೆಪಾಟಲಿಗೊಳಗಾಗಲಿರುವ ಸೂಚನೆಯೇ ನನ್ನ ಈ ವರ್ತನೆ? ಆಕೆ ದೇವತೆಯೇ ಅಥವಾ ದೆವ್ವವೇ, ಅಪ್ಸರೆಯೋ ಅಥವಾ ಅಂತರಪಿಶಾಚಿಯೋ, ಕೊನೇಪಕ್ಷ ಅಪರಿಚಿತ ಗಂಡಸೊಬ್ಬನನ್ನು ಇಷ್ಟು ಸಲಿಗೆಯಿಂದ ಮಾತಾಡಿಸುವ, ಬೇಡಿಕೆ ಸಲ್ಲಿಸುವ ಇವಳೊಬ್ಬಳು ನನ್ನನ್ನು ಮೂರ್ಖನನ್ನಾಗಿಸಲು ಯಾರೋ ಪರಿಚಿತರೇ ಹೂಡಿರಬಹುದಾದ ಹೂಟದ ಮುಖ್ಯ ಪಾತ್ರಧಾರಿಯೇ ಎಂದು ತುಸುವಾದರೂ ಅನುಮಾನಿಸುವ ವಿವೇಚನೆಯೇ ಇಲ್ಲದಷ್ಟು ಅಪ್ರಬುದ್ಧನೇ ನಾನು? ಗೊಂದಲಗೆಟ್ಟು ತಲೆ ಒದರಿದೆ. ಕಣ್ಣು ಮುಚ್ಚಿ ಹಿಂದಕ್ಕೊರಗಿದೆ.

ಮುಂದಿನ ಐದಾರು ನಿಮಿಷಗಳಲ್ಲಿ ಮನಸ್ಸು ನಿಧಾನವಾಗಿ ಇನ್ನೊಂದು ದಾರಿ ಹಿಡಿಯಿತು.

ತಾವಾಗಿಯೇ ಪತ್ರಿಕೆಗಳಲ್ಲೆಂದೂ ನನ್ನ ಕಥೆಗಳನ್ನು ಓದದೇ ನಾನಾಗಿ ಇಮೇಲ್ ಮಾಡಿದರೆ ಅಥವಾ ವರ್ಷದಿಂದೀಚೆಗೆ ಜನಪ್ರಿಯವಾಗಿರುವ ವಾಟ್ಸ್‌ಆ್ಯಪ್‌ನಲ್ಲಿ ಕಳಿಸಿದರೆ ಮಾತ್ರ ಓದುವ ಗೆಳೆಯರಿರುವ, ಲೈಕ್ ಒಂದನ್ನುಳಿದು ಓದಿದ ಯಾವ ಗುರುತನ್ನೂ ಬಿಡದ 'ಫೇಸ್‌ಬುಕ್ ಅಭಿಮಾನಿ'ಗಳೇ ಹೆಚ್ಚಾಗಿರುವ ನನ್ನೀ ಬರಹದ ಬದುಕಿನಲ್ಲಿ ನನ್ನೆಲ್ಲಾ ಕಥೆಗಳನ್ನು ಇಷ್ಟಪಟ್ಟು ಓದಿ ತನ್ನ ಬರ್ತ್‌ಡೇಗೆ ಹೊಚ್ಚಹೊಸ ಕಥೆಯೊಂದನ್ನು ಉಡುಗೊರೆಯಾಗಿ ಬಯಸುವ ಈಕೆಯ ಪ್ರವೇಶ ಒಂದು ಅಸಾಮಾನ್ಯ ಘಟನೆಯೇ ಸರಿ. ಹೆಣ್ಣಾಗಿ